

ತಮ್ಮನ್ನು ಹುಡುಕಿಕೊಂಡು ಬಂದಿದ್ದಾರೆಂಬಂತೆ ಬೂಟಿನ ಸವಂಡು ಕೇಳಿ ದಿಕ್ಕಾ ಪಾಲಾಗಿ ಓಡುವ ಅವಸರದಲ್ಲಿ ಆ ನಿಗೂಢ ಗುಣೇವುಗಳಲ್ಲಿ ಡ್ರಾಯರೋ, ಬನೀನೋ, ಆಕೆಯ ಯಾವುದೋ ಒಳ ಉಡುಪೋ ಬಿಟ್ಟು ಹೋಗುತ್ತಿದ್ದರು. ಕೊಂಚ ದೂರ ಹೋಗಿ ತಿರುಗಿ ನೋಡಿದರೆ ಆ ಬೂಟಿನ ಸದ್ದು ಬಸಮ್ಮವ್ವನ ತೆಂಗಿನ ಗಿಡದ ಶಬುದವೆಂದು ತಿಳಿದು, ಏಳು ಜನ್ಮದ ಪ್ರೇಮಿಗಳು ಬಿಟ್ಟುಹೋದ ಅಮೂಲ್ಯ ಬನೀನು, ಡ್ರಾಯರು ಸಾಮಾಗ್ರಿಗಳನ್ನು ಮೆಲ್ಲಗೆ ಬಂದು ನೋಡಿ ವ್ರತಭಂಗಗೊಂಡು ಉಂಚೆಣ್ಣು ತಿಂದ ಮಂಗನಂಗ ವಾಪಸ್ಸು ಹೋಗಿ ಬಸಮ್ಮವ್ವನ ಸುಡುಗಾಡು ಗಿಡವನ್ನು ಕಡಿಯಲೇಬೇಕೆಂಬ ಭೀಷ್ಮ ಪ್ರತಿಜ್ಞೆ ಮಾಡಿ ಐವತ್ತು ವರ್ಷಗಳೇ ಕಳೆದವು. ಅದು ಮಾತ್ರ ಶಬುದ ನಿಲ್ಲಿಸಿಲ್ಲ.

ಇಂತಪ್ಪ ಪ್ರೇಮಿಗಳ ಪಾಲಿನ ಕೊಳ್ಳಿ ದೆವ್ವವಾದ ತೆಂಗಿನಗಿಡವನ್ನು ತಳಿಕೆ ಹಾವು ಒಂದನ್ನೊಂದು